


ಎಂದ ಮೋಹನ್ ಕಿಣಿಯ ಪ್ರತಿ ಮಾತೂ ಅಲ್ಲಮಪ್ರಭುವಿನ ಮೆದುಳಿನ ರಾಶಿ ರಾಶಿ ತಂತುಗಳನ್ನು ಕಿತ್ತು ತಿನ್ನಲಾರಂಭಿಸಿದ್ದವು. ''ಎಂಥ ರೇಟು...'' ಅಲ್ಲಮಪ್ರಭುವಿನ ಮೆದುಳು ನಾಲಿಗೆಯ ಮೇಲೆ ನರ್ತಿಸಿತ್ತು. ''ನೀ ಒಂದೇಳು ಮಾರಾಯ.'' ಎಂದ ಕಿಣಿಗೆ, ''ನಿನಗೆ ಗೊತ್ತಿಲ್ಲದ್ದೇನು, ಮುಂಬಯಿ ಕುಳ ಅಂತೀಯ, ಸರಿಯಾದ ರೇಟು ಕುದಿರಿಸಿಕೊಡು.'' ಎಂದಿದ್ದ. ಅಪ್ಪ ಹೇಳಿದ್ದ ಮಾತುಗಳು ಅಲ್ಲಮಪ್ರಭುವಿನ ಮೆದುಳಲ್ಲಿ ಭದ್ರವಾಗಿ ಬೇರೂರಿಬಿಟ್ಟಿದ್ದವೇನೋ. ''ಎಕರೆಗೆ ತಲಾ ಐವತ್ತು ಲಕ್ಷ, ಮತ್ತಿನ್ನೆಂಥ ಮಾತಾಡ್ಬೇಡ. ಇಡೀ ಡಿಸ್ಟ್ರಿಕ್ಟನಲ್ಲಿ ಕೃಷಿ ಭೂಮಿ ಇಷ್ಟು ದೊಡ್ಡ ರೇಟಿಗೆ ಕ್ರಯ ಆಗ್ತಿರೋದು ಇದೇ ಮೊದಲು ತಿಳಿ.'' ಎಂದ ಕಿಣಿ ಮುಂಬಯಿ ಕುಳದೊಂದಿಗೆ ಕಾರು ಹತ್ತಿ ಐದು ನಿಮಿಷದಲ್ಲಿ ಚಿಕ್ಕ ಬ್ಯಾಗಿನೊಂದಿಗೆ ಇಳಿದು, ಬ್ಯಾಗನ್ನು ಅಲ್ಲಮಪ್ರಭುವಿನ ಕೈಯಲ್ಲಿ ಇಡುತ್ತಾ, ''ಇಗೋ ಅಲ್ಲಮ, ಐವತ್ತು ಲಕ್ಷ ಇದೆ. ಅಪ್ಪನ ತಿಥಿ ಆದ ವಾರದಲ್ಲಿ ರಿಜಿಸ್ಟ್ರೇಶನ್ ಇಟ್ಕಂಬ. ರಿಜಿಸ್ಟ್ರೇಶನ್ ದಿನ ಮಿಕ್ಕ ಅಮೌಂಟ್‌ಗೆ ಚೆಕ್ ಕೊಡ್ತಾರೆ. ಅಗ್ರಿಮೆಂಟ್ ಗಿಗ್ರಿಮೆಂಟ್ ಏನೂ ಬೇಡ. ಬಾಯಿ ಮಾತೇ ಅಗ್ರಿಮೆಂಟ್. ಅಪ್ಪಯ್ಯನ ತಿಥಿಯನ್ನು ಗ್ರ್ಯಾಂಡಾಗಿ ಮಾಡು.'' ಎಂದು ಹೇಳಿದವನು ಮುಂಬಯಿ ಪಾರ್ಟಿಯೊಂದಿಗೆ ಕಾರು ಹತ್ತಿ ಮಾಯವಾಗಿದ್ದ. ಕೇವಲ ಅರ್ಧ ಗಂಟೆಯಲ್ಲಿ ನಡೆದ ಈ ಘಟನೆ ಕನಸೋ, ವಾಸ್ತವವೋ ಅನ್ನೊ ಗೊಂದಲಕ್ಕೆ ಬಿದ್ದಿದ್ದ ಅಲ್ಲಮಪ್ರಭುವಿಗೆ ಕೈಯಲ್ಲಿದ್ದ ದುಡ್ಡಿನ ಬ್ಯಾಗನ್ನು ಪೆಟ್ಟಿಗೆಯಲ್ಲಿಡುವಾಗ ಅದು ವಾಸ್ತವದ ಸಂಗತಿಯೆಂಬುದು ಅರಿವಿಗೆ ಬಂದು ಅವನ ತನುಮನಗಳಲ್ಲಿ ಒಂಥರಾ ವಿಚಿತ್ರ ಕಂಪನಗಳನ್ನು ಉಂಟುಮಾಡಿತ್ತು. ಅಪ್ಪ ತನ್ನ ಒಳಿತಿಗಾಗಿ ಸತ್ತನೋ ಅಥವಾ ಸತ್ತ ಅನಂತರ ಆತ್ಮವಾಗಿ ತನ್ನ ಏಳಿಗೆಗಾಗಿ ತನ್ನ ಸುತ್ತಲೂ ಕಾವಲು ಕಾಯುತ್ತಿರುವನೇನೋ ಎಂಬ ಅನುಭೂತಿ ಹುಟ್ಟಿಕೊಂಡಿತ್ತು.

ತಿಥಿಯಾದ ವಾರದಲ್ಲೇ ಭೂಮಿ ರಿಜಿಸ್ಟ್ರೇಶನ್ ಆಗಿತ್ತು. ಮುಂಬಯಿ ಪಾರ್ಟಿ ಪೂರಾ ವೈಟ್ ಮನಿ ಕೊಟ್ಟಿದ್ದರಿಂದಾಗಿ ಅಲ್ಲಮಪ್ರಭುವಿಗೆ ಅನುಕೂಲವೇ ಆಗಿತ್ತು. ಖುಷಿಯಿಂದಲೇ ಮೋಹನ್ ಕಿಣಿಯ ಕೈಗೆ ಹತ್ತು ಲಕ್ಷ ಇಟ್ಟಿದ್ದ. ''ನನ್ನ ಜೀವಮಾನದಲ್ಲಿ ಇದೇ ಅತಿದೊಡ್ಡ ಕಮಿಷನ್, ಮುಂದೆ ಇಂಥ ಭಾಗ್ಯ ಬರುತ್ತೋ ಇಲ್ವೋ ಕಾಣೆ. ಅಂದ ಹಾಗೆ, ಮುಂಬಯಿ ಪಾರ್ಟಿಯ ಬಳಿಯೂ ಇಪ್ಪತ್ತು ಕೀಳ್ತೇನೆ. ಹೊನ್ನಾವರದಲ್ಲಿ ಒಂದು ಒಳ್ಳೆಯ ಸ್ವಂತ ಮನೆ ಕಟ್ಟಿಬಿಡ್ತೇನೆ. ಮನೆಗೆ 'ಅಲ್ಲಮ' ಎಂದು ನಿನ್ನ ಹೆಸರೇ ಇಡ್ತೇನೆ. ಗೃಹ ಪ್ರವೇಶಕ್ಕೆ ಬರ್ತೀಯಲ್ಲ ನೀನೆ ನೋಡುವೆಯಂತೆ.'' ಎಂದು ಕಿಣಿ ಕಣ್ಣಲ್ಲಿ ಐದಾರು ನೀರಹನಿಗಳನ್ನು ತರಿಸಿಕೊಂಡಿದ್ದ. ಎಲ್ಲಾ ಅಮೌಂಟನ್ನೂ ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಿಬಿಟ್ಟಿದ್ದ ಅಲ್ಲಮಪ್ರಭು. ಜಮೀನು ಮಾರಿದ್ದು ಅವನಿಗೇನೂ ಬೇಸರವಾಗಿರಲಿಲ್ಲ. ಬದಲಿಗೆ ಅಪ್ಪನ ಮಾತನ್ನು ಪೂರೈಸಿದೆನೆಂಬ ದೊಡ್ಡ ಸಮಾಧಾನ. ಮೊದಲ ತಿಂಗಳ ತಿಥಿಯನ್ನು ವಿಜೃಂಭಣೆಯಿಂದ ಮಾಡಿದ್ದ. ತಿಥಿಯ ದಿನ ಅಲ್ಲಮಪ್ರಭು ತನ್ನಪ್ಪನ ನೆನಪಿಗಾಗಿ ಮಾಡಿದ ದಾನವನ್ನು ನೋಡಿ ಇಡೀ ವಾನಳ್ಳಿಯೇ ಅಲ್ಲದೆ ಬನವಾಸಿಯೂ ಅವನನ್ನು ಇನ್ನಿಲ್ಲದೆ ಕೊಂಡಾಡಿತ್ತು. ಈ ಎರಡು ವರ್ಷಗಳಿಂದ ಸಾಯುವ ಘಳಿಗೆಯವರೆಗೂ ಅಪ್ಪ, ''ಲೋ ಅಲ್ಲಮ, ಗೋಕರ್ಣಕ್ಕೆ ಹೋಗಿ ಒಳ್ಳೆಯ ಭಟ್ಟರನ್ನು ಹಿಡಿದು ಪಿತೃಗಳಿಗೆ ಸಂಬಂಧಿಸಿದ ಏನೇನು ಪೂಜೆ, ಪುನಸ್ಕಾರಗಳಿವೆಯೋ ಎಲ್ಲವನ್ನೂ ಒಮ್ಮೆ ಪೂರೈಸಿ ಬಾ. ನಿಮ್ಮ ತಾತ ಸತ್ತಾಗ ಗೋಕರ್ಣಕ್ಕೆ ಹೋಗಿದ್ದಿದ್ದು ನಾನು. ನೀನಂತೂ ಆ ಕಡೆ ತಲೆ ಹಾಕಿದವನಲ್ಲ. ಅಘನಾಶಿನಿ, ತದಡಿಯವರೆಗೂ ಹೋಗುವ ನಿನ್ನ ಕಾಲುಗಳು ಮಾತ್ರ ಮಹಾಬಲೇಶ್ವರನ ಸನ್ನಿಧಿಗೆ ಹೋಗಲು ಅದೇಕೆ ಹಿಂದೇಟು ಹಾಕ್ತಾವೋ ನಾನು ಕಾಣೆ.'' ಎಂದು ಹೇಳುತ್ತಲೇ ಇದ್ದ. ಬದುಕಿದ್ದಾಗ ಅಪ್ಪನ ಮಾತು ಕೇಳಲಿಲ್ಲ, ಸತ್ತ ಮೇಲಾದರೂ ಅವರ ಮಾತನ್ನು ನೆರವೇರಿಸೋಣವೆಂದು ಮೂವತ್ತಾರು ವರ್ಷಗಳ ಹರೆಯದ